(4)

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ,KOLAR ಜಿಲ್ಲೆ

# ಮಾನ್ಯತೆ ನವೀಕರಣ ಪ್ರಮಾಣ ಪತ್ರ

ಸಂಖ್ಯೆ : 63597 ದಿನಾಂಕ : 15-Oct-2024

ವಿಷಯ : ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983 ಯೊಳಗೆ ರಚಿತವಾಗಿರುವ ನಿಯಮಗಳನ್ವಯ ಶಾಲಾ ಮಾನ್ಯತೆಯನ್ನು ನೀಡುವ ಬಗ್ಗೆ.

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ANTHARA GANGA SEVA PRATHISTHANA ಆಡಳಿತ ಮಂಡಳಿಯು 29190703304 ಡೈಸ್ ಕೋಡ್ ಸಂಖ್ಯೆ GREEN VALLEY PUBLIC SCHOOL_BEGLIHOSAHALLI VILLAGE AND POST, KOLAR TQ AND DIST. PIN-563101 ಶಾಲೆಗೆ [ವಿಳಾಸ], 1_10 ತರಗತಿವರೆಗೆ English ಮಾಧ್ಯಮಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಲು ಆನ್ಲೈನಲ್ಲಿ ಸಲ್ಲಿಸಿದ್ದ ಅರ್ಜಿಯಲ್ಲಿನ ದಾಖಲೆಗಳನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ, ಈ ಕೆಳಕಂಡಂತೆ ಮಾನ್ಯತೆಯನ್ನು ನವೀಕರಿಸಿದೆ.

| ಕ್ರ.ಸಂ. | ವಿವರ | ಆನ್ಲೈನ್ ಅರ್ಜಿ ಸಂಖ್ಯೆ : 63597 |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | ANTHARA GANGA SEVA PRATHISTHANA |
| 2 | ಶಾಲೆಯ ಹೆಸರು ಮತ್ತು ವಿಳಾಸ | GREEN VALLEY PUBLIC SCHOOL_BEGLIHOSAHALLI VILLAGE AND POST, KOLAR TQ AND DIST. PIN-563101 |
| 3 | ಡೈಸ್ ಕೋಡ್ ಸಂಖ್ಯೆ: | 29190703304 |
| 4 | ತರಗತಿ | 1 to 10 |
| 5 | ಮಾಧ್ಯಮ | English |
| 6 | ವಿಭಾಗ | 10 |
| 7 | ಶಾಲಾ ವಿಧ | Pvt. Unaided /Renewal Recognition |
| 8 | ಮಾನ್ಯತೆ ನವೀಕರಿಸಿರುವ ವರ್ಷ | 2024 2025 ಸಾಲಿನಿಂದ 2033 2034 ರವರೆಗೆ |

ಷರತ್ತುಗಳು:

1. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009, ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹಾಗೂ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅನುಸಾರ ಶಾಲೆಯನ್ನು ನೋಂದಾಯಿಸಿ, ನೋಂದಾಯಿಸಿದ ತರಗತಿವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. ಈ ತರಗತಿಗಳ ಹೊರತಾಗಿ ಹೆಚ್ಚುವರಿ ತರಗತಿಗಳನ್ನು ಮತ್ತು ಹೆಚ್ಚುವರಿ ವಿಭಾಗಗಳನ್ನು ನಡೆಸಲು ಅನುಮತಿ ಇರುವುದಿಲ್ಲ.

2. ಶಾಲೆಯು ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವುದು.

Scanned with OKEN Scanner

. ಮಕ್ಕಳ ಹಕ್ಕುಗಳ ಶಿಕ್ಷಣ ಕಾಯ್ದೆ 2009 ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಶೇಕಡಾ 25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡುವುದು. ಆರ್.ಟಿ.ಇ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಸರ್ಕಾರವು ಮೀಸಲಿಟ್ಟ ಸೀಟುಗಳನ್ನು ಆರ್.ಟಿ.ಇ ಅಡಿಯಲ್ಲಿ ದಾಖಲಿಸಲು ಅಧಿಕಾರ ಹೊಂದಿರುತ್ತದೆ. ಸರ್ಕಾರವು ಮಕ್ಕಳ ಪೋಷಕರು ವಾಸಿಸುವ ಅಕ್ಕ ಪಕ್ಕದ ಶಾಲೆಗಳಲ್ಲಿ ದಾಖಲಿಸಲು ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿದ್ದು, ಆದರಂತೆ ಸರ್ಕಾರಿ, ಸರ್ಕಾರದಿಂದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳು ಇದ್ದಲ್ಲಿ ಆ ಶಾಲೆಗೆ ಮಕ್ಕಳನ್ನು ದಾಖಲಿಸಲಾಗುವುದು] ಇಲ್ಲದಿದ್ದ ಪಕ್ಷದಲ್ಲಿ ಖಾಸಗಿ ಶಾಲೆಗಳು ಸರ್ಕಾರದಿಂದ ದಾಖಲಿಸುವ ಮಕ್ಕಳನ್ನು ದಾಖಲಿಸಿಕೊಂಡು ಪ್ರಾಥಮಿಕ ಹಂತದವರೆಗೆ ವಿದ್ಯಾಬ್ಯಾಸ ಮುಂದುವರೆಸಲು ಅವಕಾಶ ನೀಡುವುದು. ಈ ಮಕ್ಕಳನ್ನು ಯಾವುದೇ ತಾರತಮ್ಯವಿಲ್ಲದೆ ವ್ಯಾಸಂಗ ಮುಂದುವರೆಸಲು ಅವಕಾಶ ಕಲ್ಪಿಸುವುದು.

. ಕಂಡಿಕೆ:3ರಲ್ಲಿ ವಿವರಿಸಿರುವಂತೆ ಆರ್.ಟಿ.ಇ ನಿಯಮದಡಿ ದಾಖಲಾದ ಮಕ್ಕಳ ಶುಲ್ಕಗಳನ್ನು ನಿಯಮಾನುಸಾರ ಸರ್ಕಾರವು ಬಿಡುಗಡೆ ಮಾಡುತ್ತದೆ. ಆದ್ದರಿಂದ ಈ ಮಕ್ಕಳಿಂದ ಯಾವುದೇ ಶುಲ್ಕವನ್ನು ವಸೂಲು ಮಾಡುವುದನ್ನು ನಿರ್ಭಂದಿಸಿದೆ.

. ಶಾಲೆ ಮತ್ತು ಶಾಲೆಯ ಆಡಳಿತ ಮಂಡಳಿಯು ಯಾವುದೇ ತರವಾದ ಕ್ಯಾಪಿಟೇಷನ್ ಶುಲ್ಕವನ್ನು ಮತ್ತು ಸ್ವಇಚ್ಛೆಯಿಂದ ನೀಡುವ ಡೊನೇಷನ್ಗಳನ್ನು ಪೋಷಕರಿಂದ ದಾಖಲಾತಿ ಸಮಯದಲ್ಲಾಗಲೀ ಅಥವಾ ನಂತರದಲ್ಲಾಗಲೀ ಯಾವುದೇ ರೀತಿಯಾಗಿ ವಸೂಲು ಮಾಡುವುದನ್ನು ನಿರ್ಭಂದಿಸಿದೆ.

. ಶಾಲೆಯು / ಆಡಳಿತ ಮಂಡಳಿಯು ತಮ್ಮ ಶಾಲೆಯಲ್ಲಿ ಮಕ್ಕಳ ಪೋಷಕರಿಂದ ವ್ಯಾಸಂಗ ಶುಲ್ಕವಾಗಿ ವಸೂಲು ಮಾಡುವ ಶುಲ್ಕದ ಮಾಹಿತಿಯನ್ನು ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ:31:ಪಿಜಿಸಿ:2019, ದಿನಾಂಕ:27.07.2019ರನ್ವಯ ಮಾಹಿತಿಗಾಳನ್ನು ಇಲಾಖಾ ವೆಬ್ಸೈಟ್ನಲ್ಲಿ ಹಾಗೂ ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ.

7. ಶಾಲೆಯು / ಆಡಳಿತ ಮಂಡಳಿಯು ವಿದ್ಯಾರ್ಥಿಗಳನ್ನು ಸರ್ಕಾರವು ನಿಗದಿಪಡಿಸಿದೆ ಅವಧಿಯಲ್ಲಿಯೇ ದಾಖಲಾತಿ ಮಾಡಿಕೊಳ್ಳುವುದು.

8. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡ ಅಂಶಗಳ ವಿರುದ್ಧ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(i) ವಯಸ್ಸಿನ ಪುರಾವೆ ಕೊರತೆಯಿಂದಾಗಿ.

(ii) ಜಾತಿ, ಧರ್ಮ, ಹುಟ್ಟಿದ ಸ್ಥಳ, ಭಾಷೆಯ ಆಧಾರದ ಮೇಲೆ.

(iii) ಪ್ರವೇಶದ ವಿಸ್ತೃತ ಅವಧಿಯ ನಂತರ ಪ್ರವೇಶವನ್ನು ಕೋರಿದರೆ.

9. ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು, ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು. [ಸಂಬಂಧಿಸಿದ ಪ್ರಾಧಿಕಾರಗಳಿಂದ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ಹಾಗೂ K.S.C.P.C.R ಮತ್ತು N.C.P.C.R ಪ್ರಕಾರ ಮಕ್ಕಳ ಕಲಿಕೆಯ ಸುರಕ್ಷತೆ].

10. ಶಾಲೆಯು / ಆಡಳಿತ ಮಂಡಳಿಯು ಈ ಕೆಳಕಂಡಂತೆ

(i) ಪ್ರವೇಶ ಪಡೆದ ಯಾವುದೇ ಮಗುವನ್ನು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಯಾವುದೇ ತರಗತಿಯಲ್ಲಿ ಹಿಡಿದಿಟ್ಟುಕೊಳ್ಳಬಾರದು ಅಥವಾ ಶಾಲೆಯಿಂದ ಹೊರಹಾಕಬಾರದು.

(ii) ಯಾವುದೇ ಮಗುವನ್ನು ದೈಹಿಕ ಅಥವಾ ಮಾನಸಿಕವಾಗಿ ಕಿರುಕುಳಕ್ಕೆ ಒಳಪಡಿಸಬಾರದು.

(iii) ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದ್ದೇ ಘುಗು ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಗತ್ಯವಿಲ್ಲ.

(iv) ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರತಿ ಮಗುವಿಗೆ ಆರ್.ಟಿ.ಇ ನಿಯಮ 21 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ನಿಗದಿಪಡಿಸಿದಂತೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

(v) ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಬಂಧನೆಗಳ ಪ್ರಕಾರ ಶಾಲೆಯು ವಿಶೇಷ ಅಗತ್ಯತೆಗಳು / ವಿಶೇಷ ಮಕ್ಕಳನ್ನು ಹೊಂದಿರುವ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕು.

(vi) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಹಾಗೂ ಸರ್ಕಾರಿ ಆದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನಿಗದಿಪಡಿಸಿದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.

(vii) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಯಮಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ಸೂಚಿಸಿದಂತೆ ಇರುತ್ತದೆ. ಮತ್ತು ಸರ್ಕಾರಿ ಅಧಿಸೂಚನೆ [ಭವಿಷ್ಯ ನಿಧಿ (Pಈ)] ಮತ್ತು ಪಾವತಿಸಬೇಕಾದ ಬ್ಯಾಂಕ್ ಮತ್ತು ಇತರೆ ವೇತನಗಳ ಮೂಲಕ ಶಿಕ್ಷಕರಿಗೆ ವೇತನವನ್ನು ಪಾವತಿಸಲಾಗುತ್ತದೆ. ಮತ್ತು ಉದ್ಯೋಗಿ ರಾಜ್ಯ ವಿಮೆಗೆ (ಇSI) ಒಳಪಡಿಸುತ್ತದೆ.

(viii) ಶಿಕ್ಷಕರು ಕಾಯ್ದೆ ಸೆಕ್ಷನ್ 24[1] ಮತ್ತು ಆರ್.ಟಿ.ಇ ಕಾಯ್ದೆ ಮತ್ತು ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ನಿಯಮ 17ರ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಮತ್ತು ಮೇಲ್ವಿಚಾರಣೆ ಪರಿಗಣನೆಗಳಿಗಾಗಿ ಖಾಸಗಿ ಟ್ಯೂಷನ್ಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ.

Scanned with OKEN Scanner

ಶಾಲೆಯು ಸಂಯೋಜಿತವಾಗಿರುವ ಶೈಕ್ಷಣಿಕ ರಾಜ್ಯ ಪಠ್ಯಕ್ರಮ ಮತ್ತು ರಾಜ್ಯ ಪಠ್ಯ ಪುಸ್ತಕಗಳನ್ನು ಅನುಸರಿಸುವುದು.

ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 19ರಲ್ಲಿ ನಿರ್ದಿಷ್ಟಪಡಿಸಿದಂತೆ ಶಾಲೆಯು ನಿಯಮಗಳು ಮತ್ತು ಮಾನದಂಡಗಳನ್ನು ನಿರ್ವಹಿಸುವುದು. ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳಲ್ಲಿ ಸೂಚಿಸಿರುವಂತೆ ಇಲಾಖಾ ಸಿಬ್ಬಂದಿಗಳನ್ನು ನೇಮಿಸುವುದು.

13. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.

14. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.

15. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

16. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ 2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.

17. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.

18. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.

19. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.

20. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

21. ಶಾಲಾ ಮಾನ್ಯತೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

23. ಸಕ್ಷಮ ಪ್ರಾಧಿಕಾರದಿಂದ ಪಡೆದ ಸುರಕ್ಷತಾಪ್ರಮಾಣಪತ್ರಗಳುಮತ್ತುಲೀಸ್ಕರಾರುಪತ್ರದಾಖಲೆಗಳನ್ನುಅವುಗಳಅವಧಿಮುಗಿದ1ತಿಂಗಳಒಳಗಾಗಿ ನವೀಕರಿಸಿ SATS ನಲ್ಲಿ ಕಡ್ಡಾಯವಾಗಿ ಅಪ್ ಲೋಡ್ ಮಾಡುವುದು.

ಉಪನಿರ್ದೇಶಕರು(ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

KOLAR (2919) ಜಿಲ್ಲೆ

ಗೆ,

1. ಸಂಬಂಧಿಸಿದ ಆಡಳಿತ ಮಂಡಳಿ ANTHARA GANGA SEVA PRATHISTHANA

2. ಮುಖ್ಯ ಶಿಕ್ಷಕರು, /BEGLIHOSAHALLI VILLAGE AND POST, KOLAR TQ AND DIST. PIN-563101/GREEN VALLEY PUBLIC SCHOOLಶಾಲೆ ಮತ್ತು ವಿಳಾಸ

3. ಕ್ಷೇತ್ರ ಶಿಕ್ಷಣಾಧಿಕಾರಿಗಳು,KOLAR (291907) ತಾಲ್ಲೂಕು/ವಲಯ KOLAR (2919) ಜಿಲ್ಲೆ.

4. ಕಛೇರಿ ಪ್ರತಿ.

Scanned with OKEN Scanner